4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ36/2024

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕರ ನಿರೀಕ್ಷಕರು,
ಮೇಟಗಳ್ಳಿ
ಪೊಲೀಸ್ ಠಾಣೆ,
ಮೈಸೂರು ನಗರ.

**ವಿರುದ್ಧ**

ಆರೋಪಿತರು : ಶ್ರೀ ಮಂಜೇಶ್ ಎಂ

# ದೋಷಾರೋಪಣೆ

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ

ಕೆಳಕಂಡ ಆರೋಪಿಯಾದ :-

ಶ್ರೀ ಮಂಜೇಶ್ ಎಂ
ಬಿನ್ ಲೇಟ್ ಮಹದೇವಯ್ಯ,
24 ವರ್ಷ
ವಾಸಃ-
ಎಸ್ ಸಿ ಕಾಲೋನಿ,
ಕೋಳಗಾಲ ಗ್ರಾಮ,
ಹಂಪಾಪುರ ಹೋಬಳಿ,
ಹೆಚ್ ಡಿ ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಆರೋಪಿ ಮಂಜೇಶ ಆದ ನೀವು ಪುಷ್ಪಾ ಅವರೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿ ಆಕೆಯ ಮನೆಯಲ್ಲಿಯೇ ಉಳಿದುಕೊಂಡಿದ್ದು, ಆನಂತರದಲ್ಲಿ ಮೃತ ಪುಷ್ಪ ರವರು ಆರೋಪಿತರಾದ ನಿಮ್ಮೊಂದಿಗೆ ಸರಿಯಾಗಿ ಸ್ಪಂದಿಸದೇ ಇದ್ದ ಕಾರಣ ಆರೋಪಿತರಾದ ನೀವು ಮೃತೆ ನಿಮ್ಮನ್ನು ಬಿಟ್ಟು ಬೇರೆಯವರನ್ನು ನೋಡಿಕೊಂಡಿರುತ್ತಾಳೆಂದು ತಿಳಿದು, ಮೃತೆಯೊಂದಿಗೆ ಆಗಾಗ್ಗೆ ಜಗಳ ತೆಗೆದು ಹಲ್ಲೆ ಮಾಡುತ್ತಿದ್ದು, ಆರೋಪಿತರಾದ ನೀವು ದಿನಾಂಕ: 12.10.2023 ರಂದು ರಾತ್ರಿ 8.00 ಗಂಟೆಯ ಸಮಯದಲ್ಲಿ ಮೃತ ಪುಷ್ಪ ಳೊಂದಿಗೆ ಸೆಕ್ಸ್ ಮಾಡಿ, ಅನಂತರದಲ್ಲಿ, ಆಕೆಯೊಂದಿಗೆ ವಿನಾಕಾರಣ ಗಲಾಟೆ ತೆಗೆದಿದ್ದು, ಅನಂತರ ಮೃತೆಗೆ ಇನ್ನೊಂದು ಬಾರಿ ಸೆಕ್ಸ್ ಮಾಡೋಣಾ ಎಂದು ಕೇಳಿದ್ದು, ಅದಕ್ಕೆ ಮೃತ ಪುಷ್ಪರವರು ಇಷ್ಟೆಲ್ಲಾ ಗಲಾಟೆ ಮಾಡಿದ ಮೇಲೆ ನಿನ್ನೊಂದಿಗೆ ನಾನು ಇನ್ನೊಮ್ಮೆ ಸೆಕ್ಸ್ ಮಾಡುವುದಿಲ್ಲ ಎಂದು ಹೇಳಿ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದಾಗ, ಹೆಂಗೂ ಇವಳಿಗೆ ಹೇಳುವುದಕ್ಕೂ ಕೇಳುವುದಕ್ಕೂ ಯಾರೂ ಇಲ್ಲ, ಈಕೆಗೆ ಏನೇ ಮಾಡಿದರೂ ತನ್ನ ಮೇಲೆ ಯಾರಿಗೂ ಅನುಮಾನ ಬರುವುದಿಲ್ಲ ಎಂದು ಆರೋಪಿಯಾದ ನೀವು ನಿರ್ಧಾರ ಮಾಡಿಕೊಂಡು ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದ ಮೃತೆ ಪುಷ್ಪಾಳಿಗೆ ಆಕೆಯ ಸೀರೆಯನ್ನು ಕುತ್ತಿಗೆಗೆ ಹಾಕಿ ಬಿಗಿದು ಸಾಯಿಸಲು ಯತ್ನಿಸಿದ್ದು, ಮೃತೆಯು ಬಿಡಿಸಿಕೊಳ್ಳುವ ಭರದಲ್ಲಿ ಆಯಾತಪ್ಪಿ ಕೆಳಕ್ಕೆ ಬಿದ್ದಾಗ ಆರೋಪಿಯಾದ ನೀವು ಮೃತೆಯು ಕೂಗಿಕೊಳ್ಳಬಹುದೆಂದು ಭಾವಿಸಿ ಬೆಡ್ ಮೇಲೆ ಇದ್ದ ತಲೆದಿಂಬನ್ನು ತೆಗೆದುಕೊಂಡು ಕೆಳಕ್ಕೆ ಬಿದ್ದಿದ್ದ ಮೃತ ಪುಷ್ಪಾ ರವರ **ಮುಖಕ್ಕೆ ಭದ್ರವಾಗಿ ಅಮುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದು,** ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 302 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತರಾದ ನೀವು ಮೃತೆ ಪುಷ್ಪಾಳ ಕುತ್ತಿಗೆಗೆ ಬಿಗಿದಿದ್ದ ಸೀರೆಗೆ ಬೆಂಕಿಕಡ್ಡಿಯನ್ನು ಹಚ್ಚಿ ಸೀರೆಯನ್ನು ಸುಡಲು ಹೋಗಿ, ಆ ಸೀರೆಯಿಂದ ಕಂಟು ವಾಸನೆಯಿಂದ ಕೂಡಿದ ಹೊಗೆ ಬರುತ್ತಿದ್ದರಿಂದ ಅಕ್ಕ-ಪಕ್ಕದವರಿಗೆ ಅನುಮಾನ ಬರಬಾರದು ಅಂದುಕೊಂಡು ಸೀರೆಗೆಹಚ್ಚಿದ್ದ ಬೆಂಕಿಯನ್ನು ಆರಿಸಿದ್ದು, ಆರೋಪಿತರಾದ ನೀವು ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮತ್ತು ಮೃತೆ ಪುಷ್ಪಳಿಗೆ ಕುತ್ತಿಗೆಗೆ ಬಿಗಿದಿದ್ದ ಸೀರೆಯನ್ನು ಒಂದು ಕವರಿನಲ್ಲಿ ಹಾಕಿಕೊಂಡು, ಮೃತ ಪುಷ್ಪಳು ಉಪಯೋಗಿಸುತ್ತಿದ್ದ ಮೊಬೈಲ್ ಅನ್ನು ಎತ್ತಿಕೊಂಡು ಮನೆಯ ಮುಂಭಾಗಿಲಿಗೆ ಬೀಗದ ಕೀಯನ್ನು ಹಾಕಿ, ಅದರ ಬೀಗದ ಕೀಯನ್ನು ನಿಮ್ಮ ಬಳಿ ಇಟ್ಟುಕೊಂಡು ಹೊರಟು ಬಸ್ಸಿನಲ್ಲಿ ಹೋಗುವಾಗ ರಸ್ತೆಯ ನಿರ್ಜನ ಪ್ರದೇಶದಲ್ಲಿ ಬಟ್ಟೆಗಳನ್ನು ಹಾಗೂ ಮೃತೆಯ ಬಾಬ್ತು ಮೊಬೈಲ್ ಫೋನನ್ನು ಹಾಗೂ ಆರೋಪಿತರಾದ ನೀವು ಬಳಸುತ್ತಿದ್ದ ಮೊಬೈಲ್ ಫೋನನ್ನು ಎಸೆದು, ಈ ಮೂಲಕ **ಸಾಕ್ಷ್ಯಾಧಾರವನ್ನು ನಾಶಮಾಡಲು ಪ್ರಯತ್ನಿಸಿದ್ದು, ಆ** ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 201 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 15.01.2025 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ36/2024

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕರ ನಿರೀಕ್ಷಕರು,
ಮೇಟಗಳ್ಳಿ
ಪೊಲೀಸ್ ಠಾಣೆ,
ಮೈಸೂರು ನಗರ.

**ವಿರುದ್ಧ**

**ಆರೋಪಿ** ಶ್ರೀ ಮಂಜೇಶ್ ಎಂ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 15.01.2025 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.